ಮಧ್ಯಾಹ್ನ ಎರಡರ ಹೊತ್ತಿಗೆ, ಅಲಿರೆಝಾ ಮತ್ತವನ ಸ್ನೇಹಿತರು ಜಾವೆದ್ ಎಂಬ ಮಧ್ಯ ವಯಸ್ಕನನ್ನು ಗುರಿ ಮಾಡುವುದೆಂದು ನಿರ್ಧರಿಸಿದರು. ಜಾವೆದ್ ಒಂದು ಔಷಧ ಕಂಪೆನಿಯ ವಿತರಕರಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಆಗ ತಾನೆ ಕರೀಮ್ ಖಾನ್ ರಸ್ತೆರಲ್ಲಿರುವ ಸಾಮನ್ ಬ್ಯಾಂಕಿನಿಂದ ಹೊರಬರುತ್ತಿದ್ದ. ಈ ಗೆಳೆಯರು ಜಾವೆದ್‌ನನ್ನು ಅವನು ಜಮಾಲ್ ಓಣಿಯಲ್ಲಿರುವ ತನ್ನ ಕಂಪೆನಿಯ ಕಟ್ಟಡದ ಹತ್ತಿರ ಬರುವವರೆಗೂ ಕಾದರು. ಅವನು ಅದರ ಹತ್ತಿರ ಬಂದದ್ದೇ, ಅವನನ್ನು ಸುತ್ತುವರಿದು, ಅವನ ಹತ್ತಿರ ಇದ್ದಿದ್ದ ಕಾಗದ ಪತ್ರಗಳು ಮತ್ತು ಹಣದ ಪರ್ಸನ್ನು ಕಸಿದುಕೊಂಡರು. ಆ ಪರ್ಸಿನಲ್ಲಿ ಸುಮಾರು 70,000 ಟೋಮನ್ (ಸುಮಾರು 1,400 ರೂಪಾಯಿಗಳು) ಇದ್ದು, ಅಲಿರೆಝಾನಿಗೆ ತನ್ನ ಪಾಲಿನದಾದ 15,000 ಟೋಮನ್ (ಸುಮಾರು 280 ರೂಪಾಯಿ) ಸಿಕ್ಕಿತು. ಇದಾದ ನಂತರ ಅವರೆಲ್ಲರೂ ತಮ್ಮ ತಮ್ಮ ಮೋಟರ್ ಸೈಕಲ್ಲುಗಳಲ್ಲಿ ಹೊರಟರು. ನಡೆದ ಈ ಘಟನೆಯನ್ನು ಅಲ್ಲಿ ಜೋಡಿಸಿದ್ದ ವಿಡಿಯೊ ಕ್ಯಾಮೆರಾ ಸೆರೆಹಿಡಿಯಿತು ಮತ್ತು ಕೆಲವು ಗಂಟೆಗಳಲ್ಲೇ ಈ ವಿಡಿಯೊವನ್ನು ರಾಷ್ಟ್ರೀಯ ಟೀವಿ ಚಾನಲ್‌ಗಳಲ್ಲಿ ಮತ್ತು ವೆಬ್ ಸೈಟ್‌ಗಳಲ್ಲಿ ಪ್ರಸರಿಸಲಾಯಿತು.

ಮಾಧ್ಯಮದ ಗಮನವೆಲ್ಲಾ ಈ ಘಟನೆಯ ಮೇಲೆ ಕೇಂದ್ರೀಕೃತವಾಗಿ ಕರಗಿದ ಮೇಲೆ, ಈ ದುರದೃಷ್ಟಕರ ಮೊಕದ್ದಮೆಯ ಮುಂದಿನ ಹಂತ ಶುರುವಾಯಿತು. ಎಲ್ಲ ಅಧಿಕಾರಿಗಳನ್ನು ಭೇಟಿ ಮಾಡಿದ ಮೇಲೆ, ನ್ಯಾಯಾಲಯದ ಮೇಲಧಿಕಾರಿ, ಈ ಅಪರಾಧವನ್ನು, ದೇವರ ವಿರುದ್ಧದ ಯುದ್ಧಕ್ಕೆ ಸಮಾನ ಎಂದು ಸಾರಿ, ಅದಕ್ಕೆ ತಕ್ಕ ಶಿಕ್ಷೆ ನೇಣು ಎಂದು ಸಾರಿದರು.

ಈ ತೀರ್ಪು ಕೊಟ್ಟ ಮೇಲೆ, ಪೊಲೀಸರು ತಮ್ಮ ಎಲ್ಲಾ ವಿಶೇಷ ಪಡೆಗಳನ್ನು ಬಳಸಿ, ಈ ನಾಲ್ವರು ಯುವಕರನ್ನು ಸೆರೆ ಹಿಡಿದರು. ಅಲಿರೆಝಾ(22) ಮತ್ತು ಅಲಿ(24)– ಇವರು ಜಾವೆದನನ್ನು ಚಾಕು ತೋರಿಸಿ ಹೆದರಿಸಿ ದರೋಡೆ ಮಾಡಿದಕ್ಕಾಗಿ ಮತ್ತು ಮಿಲಾದ್(22), ಮೆಹರ್ದಾದ್(20) ಅವರು ಮೋಟರ್‌ಸೈಕಲ್ ಚಲಿಸಿ ಮೊದಲ ಇಬ್ಬರಿಗೆ ಸಹಾಯ ಮಾಡಿದಕ್ಕಾಗಿ. ಇವರು ಮಾಡಿದ್ದ ದರೋಡೆಯ ವಿಡಿಯೊ ಪ್ರಸಾರದಿಂದಾಗಿ ಈ ಮೊಕದ್ದಮೆ ಎಲ್ಲರಿಗೂ ತಿಳಿದಿದ್ದರಿಂದ ಮತ್ತು ವಿಶೇಷ ದಳದಿಂದ ಈ ನಾಲ್ವರನ್ನೂ ಬಂಧಿಸಿದ್ದರಿಂದ, ಬೇರೆಲ್ಲ ವಿಧಿ ವಿಧಾನಗಳೂ ಬಹಳ ಬೇಗನೆ ನಡೆದವು. ಬೇರೆಲ್ಲ ಮೊಕದ್ದಮೆಗಳಲ್ಲಿ ಹಲವು ತಿಂಗಳು ತೆಗೆದುಕೊಳ್ಳುವ ಕ್ರಮಗಳನ್ನು ಇಲ್ಲಿ ಒಂದೇ ವಾರದಲ್ಲಿ ಮುಗಿಸಲಾಯಿತು. ಕ್ರಾಂತಿಕಾರಿ ನ್ಯಾಯಾಲಯವು, ಮುಖ್ಯ ಆರೋಪಿಗಳಾದ, ಚಾಕುವಿನಿಂದ ದರೋಡೆ ಮಾಡಿದ್ದ, ಅಲಿ ಮತ್ತು ಅಲಿರೆಝಾ ಅವರಿಗೆ ಗಲ್ಲಿಗೇರಿಸುವ ಶಿಕ್ಷೆ ಜಾರಿ ಮಾಡಿತು. ಮೋಟರ್ ಸೈಕಲ್‌ನಲ್ಲಿ ಬಂದು ಅವರ ಸ್ನೇಹಿತರಿಗೆ ಸಹಾಯ ಮಾಡಿದ್ದಕಾಗಿ, ಮೆಹರ್ದಾದ್ ಮತ್ತು ಮಿಲಾದ್ ಸಹೋದರರಿಗೆ, 10 ವರ್ಷ ಜೈಲು ಶಿಕ್ಷೆ, ಎಪ್ಪತ್ತೈದು ಚಾವಟಿ ಏಟು ಮತ್ತು ಐದು ವರ್ಷಗಳ ಕಠಿಣ ಶಿಕ್ಷೆಯನ್ನೂ ವಿಧಿಸಲಾಯಿತು. ಇವರಿಂದ ದರೋಡೆಗೊಳಗಾದ, ಮೊದಲ ದಾವೇದಾರ ಜಾವೆದ್, ಇವರೆಲ್ಲರ ಮೇಲೆ ಇದ್ದ ಆರೋಪಗಳನ್ನು ಮನ್ನಾ ಮಾಡಿ ಮೊಕದ್ದಮೆಯನ್ನು ವಜಾ ಮಾಡಿ ಎಂದು ನ್ಯಾಯಾಲಯವನ್ನು ಕೇಳಿಕೊಂಡಿದ್ದರೂ ಸೋದರರು ದರೋಡೆ ಮಾಡಿದ ಸ್ಥಳದ ಹತ್ತಿರದ ಜಾಗದಲ್ಲೇ, ಇಬ್ಬರನ್ನೂ, ಒಂದು ಭಾನುವಾರದ ಬೆಳಿಗ್ಗೆ ಗಲ್ಲಿಗೇರಿಸಲಾಯಿತು.

ನಗರದ ಈ ಭಾಗದಲ್ಲಿ ಮುಖ್ಯವಾದ ಕಲಾ ಗ್ಯಾಲರಿಗಳೂ ಮತ್ತು ನಾಟಕ ಮಂದಿರಗಳೂ ಇವೆ. 'ಕಲಾವಿದರ ಮನೆ' ಎಂದು ಕರೆಯುವ ಇಟ್ಟಿಗೆಗಳು ಕಾಣುವ ಕಟ್ಟಡದಿಂದ ಸ್ವಲ್ಪವೇ ದೂರ ಇರುವ ಕಲಾವಿದರ ಉದ್ಯಾನವನದ ಉತ್ತರ ಭಾಗದಲ್ಲಿ ಇಬ್ಬರಿಗೂ ನೇಣು ಹಾಕಲಾಯಿತು. ಆ ನಾಟಕ ಮಂದಿರದಲ್ಲಿ, ಆ ತಿಂಗಳಲ್ಲಿ ಹ್ಯಾಮ್ಲೆಟ್, ಮತ್ತು ಘಿಯಾಸ್ ಎದ್–ದಿನ್ ಮಾಲ್ ಫ಼ರೇಗ್‌ನ